ನಿನ್ನೆ ತಾನೆ ಅವರಿಗೆ ಬಂದಿದೆ, ಈಗ ಅವರು ಕಾಲಾವಕಾಶ ಕೇಳುತ್ತಿದ್ದಾರೆ.

ಶ್ರೀ ಬಿ.ಶಿವರಾಮು:- ನನ್ನದೂ ಒಂದು ಪ್ರಶ್ನೆ ಹೆಲ್ಡ್ ಓವರ್ ಆಗಿದೆ, 4 ಸಾರಿ ಬಂದಿಲ್ಲ, ಬಹಳ ಪ್ರಮುಖವಾದ ಪ್ರಶ್ನೆ. ರೈತರು ಸಾಲ ತೆಗೆದುಕೊಂಡು ಬಾವಿಗಳನ್ನು ತೋಡಿ, ಡ್ರೈ ಆಗಿ, ಒಣಗಿದ ಬಾವಿಗಳಿಗೆ 1987 ರಿಂದಲೂ ಸಾಲ ಮನ್ನಾ ಮಾಡಿಲ್ಲ. ನಾನು ಈ ಅಂಕಿ ಅಂಶಗಳನ್ನು ಕೇಳಿ ಒಂದು ಪ್ರಶ್ನೆ ಹಾಕಿದ್ದೇನೆ. 4 ಸಲ ಹೆಲ್ಡ್ ಓವರ್ ಆಯಿತು ಇದುವರೆಗೂ ಸರ್ಕಾರದಿಂದ ಉತ್ತರ ಬಂದಿಲ್ಲ. ಈ ರೀತಿ ಮಾಡುತ್ತಾ ಇದ್ದರೆ, ನಾವು ಏನು ಮಾಡಬೇಕು. ನಾವು ರೈತರಿಗೆ ನ್ಯಾಯ ಒದಗಿಸುವುದಕ್ಕಾಗುತ್ತದೆಯೇ ? ಮಾನ್ಯ ಸಚಿವರು ಆಸಕ್ತಿ ತೆಗೆದುಕೊಂಡು ಉತ್ತರ ಒದಗಿಸಿಕೊಡಬೇಕು. ಏಕೆಂದರೆ, ಆಯವ್ಯಯದಲ್ಲಿ ಇದಕ್ಕಾಗಿ ಹಣ ಒದಗಿಸಿಲ್ಲ. ನಾನು ಇದಕ್ಕೆ ಸಂಬಂಧಪಟ್ಟ ಇಲಾಖೆಗೆ ಹೋಗಿ ಬಂದಿದ್ದೇನೆ, ಅವರ ಹತ್ತಿರ ವಿಚಾರ ಇಲ್ಲ, ಅಂಕಿಅಂಶ ಇಲ್ಲ. ಇದರ ಬಗ್ಗೆ ಸರ್ಕಾರದವರು ಗಮನ ಹರಿಸದೇ, ತಾವು ನಮ್ಮನ್ನು ಕುಳಿತುಕೊಳ್ಳಿ ಎಂದು ಹೇಳಿದರೆ, ಕುಳಿತುಕೊಳ್ಳುತ್ತೇವೆ. ನಮಗೆ ಆಲ್ಟರ್‌ನೇಟಿವ್ ಉಳಿದಿರುವುದು ಅದು ಒಂದೇ. ಆದರೆ, ನಾವು ಜನತೆಗೆ ನ್ಯಾಯವನ್ನು ಒದಗಿಸಿಕೊಡುವುದಕ್ಕಾಗುವುದಿಲ್ಲ.

ಛೇರ್ಮನ್:-ಇಲ್ಲಿ ಉದ್ದೇಶಪೂರ್ವಕವಾಗಿ ಯಾವುದೂ ಆಗುವುದಿಲ್ಲ. ಕಾರಣಾಂತರದಿಂದ ಆಗುತ್ತದೆ., ಮುಂದೆ ಈ ರೀತಿ ಆಗುವುದಿಲ್ಲ. ದಯಮಾಡಿ ಕುಳಿತುಕೊಳ್ಳಬೇಕು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು.

ವಿಷಯ:-ಅಲೆಮಾರಿ ಜನಾಂಗದವರ ವಿಶೇಷ ಅಭಿವೃದ್ಧಿ ಯೋಜನೆಯನ್ನು ಜಾರಿಗೊಳಿಸುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 461 (919)

ಶ್ರೀ ಎಸ್.ರುದ್ರಪ್ಪ (ತುರುವೇಕೆರೆ):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.?

ಅ ಕೇಂದ್ರ ಸರ್ಕಾರದ ಮಾರ್ಗಸೂಚಿಯ ಮೇರೆಗೆ ಅಲೆಮಾರಿ ಜನಾಂಗದವರನ್ನು ಗುರುತಿಸಲಾಗುತ್ತಿದೆಯೇ;

ಆ ಸದರಿ ಜನಾಂಗದವರನ್ನು ಗುರುತಿಸಲು ನಿರ್ದೇಶಕರ ಕಛೇರಿಯ ಪತ್ರ ಸಂಖ್ಯೆ:ಬಿಸಿಎಂ:ಸಿಡಿಎನ್-1:ಸಿಆರ್-13:90-91ರ ಪ್ರಕಾರ ಸರ್ಕಾರದ ಆದೇಶ ಸಂಖ್ಯೆ :ಬಿಹೆಚ್‌ಎಸ್ 262ಎಸ್‌ಇಡಬ್ಲ್ಯೂ 65 ದಿನಾಂಕ 1-2-66ನೇ ಪ್ರಕಾರ ಅಲೆಮಾರಿ ಜನಾಂಗದವರ ಪಟ್ಟಿಯನ್ನು ಇಲಾಖಾ ಅಧಿಕಾರಿಗಳಿಗೆ ಕಳುಹಿಸಿಕೊಡಲಾಗಿದೆಯೇ?

ಇ ಹಾಗಿದ್ದಲ್ಲಿ ದಿನಾಂಕ: 1-2-66ರ ಸರ್ಕಾರಿ ಆದೇಶದ ಪ್ರಕಾರ ಅಲೆಮಾರಿ ಜನಾಂಗದವರ ಪಟ್ಟಿಯನ್ನು ಪ್ರಕಟಿಸಲಾಗಿದೆಯೇ, ಇಲ್ಲಿದಿದ್ದಲ್ಲಿ ಕಾರಣವೇನು, ಎಷ್ಟು ಸಮಯದಲ್ಲಿ ಪ್ರಕಟಿಸಲಾಗುವುದು.

ಈ ಅಲೆಮಾರಿ ಜನಾಂಗದವರ ಕ್ರಿಯಾ ಯೋಜನೆಯನ್ನು ರೂಪಿಸಿ ಕೇಂದ್ರಕ್ಕೆ ಕಳುಹಿಸಲು 2 ವರ್ಷಗಳಾದರೂ ಕಳುಹಿಸದಿರಲು ಕಾರಣವೇನು, ಎಷ್ಟು ಸಮಯದಲ್ಲಿ ಕಳುಹಿಸಲಾಗುವುದು.

ಉ ಗುರುತಿಸಲಾಗಿರುವ ಅಲೆಮಾರಿ ಜನಾಂಗದ ಜಾತಿ, ಗ್ರಾಮ, ತಾಲ್ಲೂಕು, ಜಿಲ್ಲೆಗಳ ವಿವರಗಳನ್ನು ನೀಡುವುದು.;

ಊ ಯೋಜನೆಗಳನ್ನು ಅನುಷ್ಠಾನ ಗೊಳಿಸಲು ಸರ್ಕಾರದಿಂದ ಮಾರ್ಗಸೂಚಿ ನೀಡಲ್ಲಾಗಿದೆಯೇ, ಹಾಗಿದ್ದಲ್ಲಿ ಸದರಿ ಪ್ರತಿಯನ್ನು ನೀಡುವುದು. ಇಲ್ಲದಿದ್ದಲ್ಲಿ ಎಷ್ಟು ಸಮಯದಲ್ಲಿ ಅದನ್ನು ಹೊರಡಿಸಲಾಗುವುದು?

ಶ್ರೀ ಬಿ.ಶಿವಣ್ಣ (ಸಮಾಜ ಕಲ್ಯಾಣ ಸಚಿವರು)

ಅ ಕೇಂದ್ರ ಸರ್ಕಾರವು ಅಲೆಮಾರಿ, ಅರೆ ಅಲೆಮಾರಿ ವಿಮುಕ್ತಿ ಜಾತಿಗಳು ಹಾಗೂ ಗ್ರಾಮೀಣ ಕೈಗಾರಿಕೆಗಳ ಜನರ ಅಭಿವೃದ್ಧಿಗಾಗಿ ವಿಶೇಷ ಘಟಕ ಯೋಜನೆಯೊಂದನ್ನು ರೂಪಿಸಲು ಯೋಜಿಸಿದ್ದು

ಇದಕ್ಕಾಗಿ ಹಲವಾರು ಮಾಹಿತಿಗಳನ್ನು ರಾಜ್ಯ ಸರ್ಕಾರದಿಂದ ನಿಗದಿತ ನಮೂನೆಯಲ್ಲಿ ಕೋರಿದ್ದು ಈ ಮಾಹಿತಿಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಸಂಗ್ರಹಿಸಲಾಗುತ್ತಿದ್ದು, ಇವುಗಳು ಬಂದ ನಂತರ ಕ್ರೋಢೀಕರಿಸಿ ಮುಂದಿನ ಕ್ರಮಗಳಿಗಾಗಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಲಾಗುವುದು. ಇಷ್ಟೇ ಹೊರತು ಅಲೆಮಾರಿ ಜನಾಂಗವನ್ನು ಗುರುತಿಸುವಲ್ಲಿ ಯಾವುದೇ ಮಾರ್ಗಸೂಚಿಯನ್ನು ನೀಡಿರುವುದಿಲ್ಲ.

ಆ ಪ್ರಶ್ನೆ 'ಅ'ದ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಇ ಪ್ರಸ್ತುತ ರಾಜ್ಯದಲ್ಲಿರುವ ಮೀಸಲಾತಿ ನಿಯಮಾವಳಿಗಳ ಮೇರೆಗೆ ಅಲೆಮಾರಿ ಜನಾಂಗಗಳು 'ಎ' ಗುಂಪಿನಡಿಯಲ್ಲಿ ಬರುವುದರಿಂದ ಪ್ರತ್ಯೇಕ ಪಟ್ಟಿಯನ್ನು ಪ್ರಕಟಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ ಕೇಂದ್ರ ಸರ್ಕಾರದವರು ಕೇಳಿರುವ ಮಾಹಿತಿಗಳನ್ನು ರಾಜ್ಯದ ಎಲ್ಲಾ ವಿಭಾಗಾಧಿಕಾರಿಗಳಿಂದ ಜಿಲ್ಲಾ ಪರಿಷತ್ತುಗಳ ಮುಖ್ಯ ಕಾರ್ಯದರ್ಶಿಗಳಿಂದ ಹಾಗೂ ಜಿಲ್ಲಾ ಅಧಿಕಾರಿಗಳಿಂದ ಕೋರಲಾಗಿದ್ದು ಅವುಗಳು ಬಂದ ನಂತರ ತ್ವರಿತದಲ್ಲಿ ಕ್ರೋಡಿಕರಿಸಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಲಾಗುವುದು.

ಉ ಪ್ರಶ್ನೆ 'ಅ'ದ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಊ ಪ್ರಶ್ನೆ 'ಅ'ದ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ವಿಷಯ:- ಕೊಡಗು ಜಿಲ್ಲೆಯಲ್ಲಿ ಸ್ವಯಂ ಉದ್ಯೋಗ ಯೋಜನೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 464 (593)

ಶ್ರೀಮತಿ ಸುಮಾ ವಸಂತ (ವಿರಾಜಪೇಟೆ):- ಮಾನ್ಯ ಸಣ್ಣ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ ಕೊಡಗು ಜಿಲ್ಲೆಯಲ್ಲಿ ಸ್ವಯಂ ಉದ್ಯೋಗದ ಯೋಜನೆಯಡಿಯಲ್ಲಿ ಪ್ರತಿ ವರ್ಷ ಎಷ್ಟು ಜನ ಯುವಕರಿಗೆ ಉದ್ಯೋಗ ಒದಗಿಸಲಾಗಿದೆ? (1989ರಿಂದ 1992ರವರೆಗೆ ತಾಲ್ಲೂಕುವಾರು, ವರ್ಷವಾರು ವಿವರ ನೀಡುವುದು).

ಆ ಈ ಯೋಜನೆಯಲ್ಲಿ ಪ್ರತಿ ವರ್ಷ ಬಿಡುಗಡೆ ಆಗಿರುವ ಹಣ ಎಷ್ಟು?

ಇ ಸ್ವಯಂ ಉದ್ಯೋಗಾರ್ಥಿಗಳಿಗೆ ಈ ಯೋಜನೆಯ ಫಲ ದೊರಕಲು ಆಯ್ಕೆ ಸಮಿತಿಗಳಲ್ಲಿ ಅಧಿಕಾರೇತರರಿಗೆ ಅವಕಾಶ ಇದೆಯೇ?

ಈ ಈ ಜಿಲ್ಲೆಯಲ್ಲಿ ಈ ಯೋಜನೆಯಡಿಯಲ್ಲಿ ಸ್ವಯಂ ಉದ್ಯೋಗಿಗಳಾಗಿರುವವರ ಸಂಖ್ಯೆ ಎಷ್ಟು?

ಶ್ರೀ ನಸೀರ್ ಅಹಮದ್ (ಸಣ್ಣ ಕೈಗಾರಿಕಾ ರಾಜ್ಯ ಸಚಿವರು)

ಅ ಭಾರತ ಸರ್ಕಾರದವರು 1983-84ರಿಂದ ವಿದ್ಯಾವಂತ ನಿರುದ್ಯೋಗಿಗಳ ಸ್ವಯಂ ಉದ್ಯೋಗ ಯೋಜನೆಯನ್ನು ಚಾಲಿಗೆ ತಂದಿದ್ದು, ಇಲ್ಲಿಂದ ಪ್ರತಿ ವರ್ಷ ಕೊಡಗು ಜಿಲ್ಲೆಯಲ್ಲಿ ಅಭ್ಯರ್ಥಿಗಳಿಗೆ ಉದ್ಯೋಗ ಒದಗಿಸಿರುವ ಬಗ್ಗೆ ಮಾಹಿತಿ ಈ ಕೆಳಕಂಡಂತಿದೆ.

ವರ್ಷ	ಉದ್ಯೋಗದ ಸಂಖ್ಯೆ
1983-84	140
1984-85	247
1985-86	248
1986-87	192
1987-88	118
1988-89	162